# ಸಕ್ಕರೆ ಸಿಹಿ

ಸಕ್ಕರೆಗೆ ಬೇಡಿಕೆ ಹೆಚ್ಚಾಗುತ್ತಿರುವಂತೆ ಸಕ್ಕರೆ ಗಿರಣಿಗಳು ತಮ್ಮ ಧಾರಣೆಗಳನ್ನು ಸ್ಥಿರಗೊಳಿಸುತ್ತಿರುವುದು ಕಂಡು ಬರುತ್ತಿದೆ. ವಾಶಿ ಮಾರುಕಟ್ಟೆಯಲ್ಲಿ ಸಕ್ಕರೆ ಧಾರಣೆ ಕ್ವಿಂಟಾಲ್‌ಗೆ ರೂ.10–15ರಷ್ಟು ತೇಜಿಯಾಗಿದೆ. ಮಾರುಕಟ್ಟೆಗಳಿಗೆ ಆವಕ ಹೆಚ್ಚಾಗುತ್ತಿದ್ದು, ವಾಶಿ ಮಂಡಿಗಳಲ್ಲಿ ಸದ್ಯ 110–115 ಟ್ರಕ್ ಲೋಡ್‌ಗಳಷ್ಟು ಸಕ್ಕರೆ ದಾಸ್ತಾನಿದೆ ಎನ್ನಲಾಗಿದೆ. ಮಾರುಕಟ್ಟೆಗಳಿಗೆ 60–65 ಲೋಡ್ ಸಕ್ಕರೆ ಆವಕವಾಗುತ್ತಿದೆ. ಸುಮಾರು 60 ಲೋಡ್‌ಗಳಷ್ಟು ಮಾರಾಟವಾಗುತ್ತಿದೆ.